# ಧೋನಿ ಐಪಿಎಲ್ ಆನಿ

■ ಎನ್ವಿ

**ಆನೆ ನಡೆದದ್ದೇ ಮಾರ್ಗ ಎನ್ನುವಂತೆ ಧೋನಿ ನಡೆದದ್ದೇ ಯಶಸ್ಸಿನ ಹೆದ್ದಾರಿ! ಐಪಿಎಲ್‌ನಲ್ಲಿ ಅವರು ಕಿರಿಯರನ್ನು ರೂಪಿಸಿದ ಮಾದರಿ ಹಾಗೂ ತಂದುಕೊಟ್ಟ ಗೆಲುವುಗಳು ಅಸಾಧಾರಣ.**

ಏಪ್ರಿಲ್ 4ನೇ ತಾರೀಕು. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಪಂದ್ಯ. ಲಖನೌ ಸೂಪರ್ ಜೈಂಟ್ಸ್ ತಂಡದ ಮಾರ್ಕ್ ವುಡ್ ಪ್ರತಿ ಗಂಟೆಗೆ 145ರಿಂದ 150 ಕಿ.ಮೀ. ವೇಗದಲ್ಲಿ ಬೌಲ್ ಮಾಡುತ್ತಿದ್ದರು. ಚೆಪಾಕ್‌ನ ಕ್ರೀಡಾಂಗಣದಲ್ಲಿ ಚೆನ್ನೈ ಸೂಪರ್‌ಕಿಂಗ್ಸ್ ತಂಡ ಆಡಲು ಇಳಿದದ್ದು ನಾಲ್ಕು ವರ್ಷಗಳ ನಂತರ. ಇನ್ನೇನು ಗಡುವಿನ 20 ಓವರ್‌ಗಳ ಕೋಟಾ ಮುಗಿಯುತ್ತಾ ಬಂತು ಎನ್ನುವಾಗ ನಾಯಕ ಮಹೇಂದ್ರ ಸಿಂಗ್ ಧೋನಿ ಬ್ಯಾಟಿಂಗ್‌ಗೆ ಬಂದರು. ರಾಜಸಭೆಗೆ ಮಹಾರಾಜರು ಬಂದಾಗ ಒಡ್ಡೋಲಗ ಮೊಳಗುತ್ತದಲ್ಲ, ಹಾಗಿತ್ತು ಜನರ ಒಕ್ಕೊರಲು. ಒತ್ತಡವನ್ನೆಲ್ಲ ಪಕ್ಕಕ್ಕೆ ಸರಿಸುವಂತೆ ಎಂದಿನ ತಮ್ಮ ಶೈಲಿಯಲ್ಲಿ ಬ್ಯಾಟನ್ನು ಬೀಸುತ್ತಾ ನಡೆದು ಬಂದ ಅವರು ಆಡಿದ್ದು ಮೂರೇ ಬಾಲ್. ಅದರಲ್ಲಿ ಎರಡು ಸಿಕ್ಸರ್. ಆಫ್‌ಸೈಡ್‌ನತ್ತ ಹೊಡೆದ ಒಂದು ಸಿಕ್ಸರ್ ಅಂತೂ ಖುದ್ದು ಬೌಲರ್ ಮಾರ್ಕ್ ವುಡ್ ಕಣ್ಣುಗಳನ್ನೇ ಅರಳಿಸಿತ್ತು.

ಮೇ 29ರಂದು ಐಪಿಎಲ್ ಫೈನಲ್ ನಡೆದಾಗ ಧೋನಿ ಮೊದಲ ಬಾಲ್‌ನಲ್ಲೇ ಔಟಾದರು. ಕೊನೆಯ ಎಸೆತದಲ್ಲಿ ತಂಡಕ್ಕೆ ನಾಲ್ಕು ರನ್ ಬೇಕಿದ್ದಾಗ, ಅವರು ಡಗ್‌ಔಟ್‌ನಲ್ಲಿ ಕಣ್ಣುಮುಚ್ಚಿ ಕೂತಿದ್ದರು. ಸಹ ಆಟಗಾರರು ಎಬ್ಬಿಸಿದಾಗಲೇ ಕಣ್ಣುಬಿಟ್ಟಿದ್ದು. ಅವರ ನೆಚ್ಚಿನ ಆಲ್‌ರೌಂಡರ್ ರವೀಂದ್ರ ಜಡೇಜಾ ಪಂದ್ಯ ಗೆಲ್ಲಿಸಿಕೊಂಡು ಬಂದಾಗ, ಅವರನ್ನು ಧೋನಿ ಪುಟ್ಟ ಮಗುವನ್ನು ಎತ್ತುವಷ್ಟೇ ಸಲೀಸಾಗಿ ಮೇಲೆತ್ತಿದರು. ಐದನೇ ಸಲ ಕಪ್ ಅವರದ್ದೇ.




ಧೋನಿ ಹೀಗೆ ಈ ಸಲದ ಐಪಿಎಲ್‌ನಲ್ಲಿ ಎಷ್ಟೋ ಆಟಗಾರರನ್ನು ಮೇಲೆತ್ತಿದ್ದಾರೆ. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಸಂಯಮವನ್ನು ಎರಕ ಹೊಯ್ದಂತೆ ಆಡಿ, ದ್ವಿಶತಕಗಳನ್ನು ಜೋಡಿಸಿಡುತ್ತಿದ್ದ ಅಜಿಂಕ್ಯ ರಹಾನೆ ಆಟ ನೋಡಿ. ಈ ಸಲ ಅವರೂ ಚಚ್ಚಪ್ಪ ಆದರು. ಆಪ್ತೇಷ್ಟರ ಪ್ರಕಾರ, ಅವರನ್ನು ಈ ರೀತಿ ಮಾಡಿದ್ದೇ ಧೋನಿ.

2022ರ ಐಪಿಎಲ್‌ನಲ್ಲಿ ಕೊನೆಯಿಂದ ಎರಡನೇ ಸ್ಥಾನದಲ್ಲಿ ಚೆನ್ನೈ ತಂಡ ಇತ್ತು. ಹನ್ನೊಂದು ಸಲ ಪ್ಲೇಆಫ್ ಪ್ರವೇಶಿಸಿ, ನಾಲ್ಕು ಸಲ ಕಪ್ ಎತ್ತಿ ಹಿಡಿದಿದ್ದ ತಂಡ ಹೀಗಾ ಮಕಾಡೆಯಾಗುವುದು ಎಂದು ಚೆನ್ನೈ ಅಭಿಮಾನಿಗಳೆಲ್ಲ ಅವಾಕ್ಕಾಗಿದ್ದರು. ಹೋದವರ್ಷ ಧೋನಿ ನಾಯಕತ್ವದ ನೊಗವನ್ನು ಎತ್ತಿ ರವೀಂದ್ರ ಜಡೇಜಾ ಹೆಗಲ ಮೇಲೆ ಇಟ್ಟಿದ್ದರು. ಆ ನೊಗದ ಸಹವಾಸವೇ ಬೇಡ ಎಂದು ಜಡೇಜಾ ಹೇಳಿದ ಮೇಲೆ ನಿರ್ವಾತವೊಂದು ಇತ್ತು. ಮತ್ತೆ ಧೋನಿ ಅದನ್ನು ಎತ್ತಿ ಭುಜದ ಮೇಲೆ ಇಟ್ಟುಕೊಂಡರು.

ಧೋನಿ ರಾಂಚಿಯಲ್ಲಿ ಅಭ್ಯಾಸ ಮಾಡುವಾಗಲೇ ಅವರು ಹೊಡೆಯುತ್ತಿದ್ದ ಶಾಟ್‌ಗಳಿಗೆ ಅವರದ್ದೇ ರುಜುವಿತ್ತು. ಭಾರತ ಕ್ರಿಕೆಟ್ ತಂಡದ ನಾಯಕರಾಗಿ ವಿಶ್ವಕಪ್‌ಗಳನ್ನು ಗೆದ್ದಮೇಲೆ ನಾಯಕತ್ವದ ಛಾಪು. ಅದನ್ನೇ ಅವರು ಐಪಿಎಲ್‌ನ ಹೊಸ ಬಗೆಯ ಆಟಕ್ಕೂ ಒಗ್ಗಿಸಿಕೊಂಡರು. ಆಯಾ ದಿನ ಪಂದ್ಯದ ಸ್ಥಿತಿಗತಿಗೆ ತಕ್ಕಂತೆ ಅವರು ಚಕ್ಕನೆ ತಂತ್ರಗಳನ್ನು ಹೊಸೆಯುವುದನ್ನು ಕ್ರಿಕೆಟ್ ಸೂಕ್ಷ್ಮ ಇರುವ ಯಾರಾದರೂ ನೋಡಬಹುದು.

ಅವರು ಬರೀ ಬ್ಯಾಟ್ಸ್‌ಮನ್‌ಗಳನ್ನು ಬೆಳೆಸುವುದಿಲ್ಲ. ಅವರಿಗೆ ದಿಕ್ಕು ತೋರಿಸಿ ಸುಮ್ಮನಾಗುತ್ತಾರೆ. ಆರ್. ಗಾಯಕವಾಡ್ ಆರಂಭಿಕ ಆಟಗಾರನಾಗಿ ಪಾದಚಲನೆಯಲ್ಲಿ ತೋರುತ್ತಿರುವ ನಿಯಂತ್ರಣ, ವೃತ್ತಿಬದುಕಿನ ಸಂಜೆಗಾಲದಲ್ಲಿ ಅಂಬಟಿ ರಾಯುಡು ಮುಖದ ಮೇಲೆ ನಗು ಮೂಡಿಸುವಂತಹ ಆತ್ಮವಿಶ್ವಾಸ, ಶ್ರೀಲಂಕಾದ ಜೂನಿಯರ್ ಮಲಿಂಗ ಎಂದೇ ಹೆಸರಾದ ಪಥಿರಾಣಾ ರಿವರ್ಸ್ ಸ್ವಿಂಗ್ ಮೇಲಿನ ನಂಬುಗೆ – ಇವೆಲ್ಲವೂ ಧೋನಿ ಈ ಐಪಿಎಲ್‌ನಲ್ಲಿ ರೂಪಿಸಿಟ್ಟ ಮಾದರಿಗಳು.

ಈಗ ಧೋನಿ ಕಾಲುಗಳಲ್ಲಿ ಮೊದಲ ಕಸುವಿಲ್ಲ. ಆದರೆ, ಮೆದುಳು ಮಾತ್ರ ಮೊದಲಿನಷ್ಟೇ ಚುರುಕು. ಅವರನ್ನು ಬೌಲರ್‌ಗಳ ಮೆಚ್ಚಿನ ನಾಯಕ ಎಂದು ಸುರೇಶ್ ರೈನಾ ಬಣ್ಣಿಸಿದ್ದರಲ್ಲಿ ನಿಜಕ್ಕೂ ಅರ್ಥವಿದೆ. ಅವರಿಂದ ಪಾಠ ಕಲಿತ ಹೊಸ ಹುಡುಗರಲ್ಲಿ ಹೊಳೆಯಲಿರುವವರ ಸಂಖ್ಯೆ ಕೂಡ ದೊಡ್ಡದಿದೆ.

ಪ್ರತಿಕ್ರಿಯಿಸಿ: feedback@sudha.co.in

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65